ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು).—

ಅ) ಡಿಸೈಲ್ ಎಣ್ಣೆ, ಮೃದು ಚಾಲಕ ಎಣ್ಣೆ ಟೈರ್ ಮತ್ತು ಟ್ಯೂಬ್, ಬಿಡಿ ಭಾಗಗಳ ಬೆಲೆ ಏರಿಕೆ ಆಗಿರುವುದನ್ನು ಸರಿದೂಗಿಸಲು ಮತ್ತು ಸಿಬ್ಬಂದಿ ವೆಚ್ಚ ಹಾಗೂ ಇತರೇ ವೆಚ್ಚಗಳನ್ನು ಭರಿಸುವ ಕಾರಣದಿಂದ ಪ್ರಯಾಣ ದರವನ್ನು ಪರಿಷ್ಕರಿಸಲಾಗಿದೆ.

ಆ) ಸಾರ್ವಜನಿಕರ ಪ್ರತಿಕ್ರಿಯೆಯನ್ನು ಪರಿಗಣಿಸಿ ಪ್ರಯಾಣ ದರಗಳನ್ನು ನಂತರ ಸಾಕಷ್ಟು ಕಡಿಮೆ ಮಾಡಿರುವುದರಿಂದ ಪ್ರಯಾಣಿಕರಿಗೆ ರಿಯಾಯಿತಿ ದೊರೆತಂತಾಗಿದೆ.

ಕೋಟೆಬಾಗಿಲಂ ಕೊಡೇರಿಗಳಲ್ಲಿ ಸಮುದ್ರ ಕೊರೆತ

೩೬೯. ಶ್ರೀ ಜಿ ಎಸ್. ಆಚಾರ್ (ಬೈಂದೂರ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಪಡುವಾರ ಗ್ರಾಮದ ಕೋಟೆಬಾಗಿಲು ಮತ್ತು ಕಿರಿಮಂಜೇಶ್ವರ ಗ್ರಾಮದ ಕೊಡೇರಿಗಳಲ್ಲಿ ಸಮುದ್ರ ಕೊರೆತದಿಂದ ಅಪಾರ ಹಾನಿ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಇನ್ನು ಮುಂದೆ ಸಮುದ್ರ ಕೊರೆತ ಇನ್ನು ಆಗದಂತೆ ತಡೆಗಟ್ಟಲು ಸರ್ಕಾರದವರ ಯೋಜನೆಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಬಂದಿದೆ.

ಆ) ೧೯೯೦-೯೧ನೇ ಸಾಲಿನ ಆಯವ್ಯಯದಲ್ಲಿ ಕುಂದಾಪುರ ತಾಲ್ಲೂಕಿನ ಪಡುವರಿ ಗ್ರಾಮದ ಕೋಟೆಬಾಗಿಲು ಎಂಬಲ್ಲಿ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣದ ಕಾಮಗಾರಿ ೧೦.೦೦ ಲಕ್ಷ ರೂ.ಗಳ ಅಂದಾಜಿನೊಂದಿಗೆ ಮತ್ತು ಕುಂದಾಪುರ ತಾಲ್ಲೂಕು ಕೋಡೇರಿ ಬಳಿ ಹಿಮ್ಮಡಿ (ಸ್ಪರ್ಸ್) ನಿರ್ಮಾಣದ ಕಾಮಗಾರಿ ೧೦.೦೦ ಲಕ್ಷ ರೂ.ಗಳ ಅಂದಾಜಿನೊಂದಿಗೆ ಸೇರಿವೆ. ಈ ಎರಡೂ ಕಾಮಗಾರಿಗಳಿಗೆ ತಲಾ ೨೫,೦೦೦ ರೂ. ಅನುದಾನ ಒದಗಿಸಲಾಗಿದೆ. ಈ ಎರಡೂ ಹೊಸ ಕಾಮಗಾರಿಗಳ ಅಂದಾಜನ್ನು ತಯಾರಿಸಬೇಕಾಗಿದೆ ಅಂದಾಜು ತಯಾರಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಸಾರಿಗೆ ಸಿಬ್ಬಂದಿ ವರ್ಗದವರ ಬಗ್ಗೆ

೧೯೧. ಶ್ರೀ ಬಿ. ಹೆಚ್. ಬನ್ನಿಕೋಡ್. (ಹಿರೇಕೆರೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿರೇಕೆರೂರು ಘಟಕದಲ್ಲಿರುವ ಚಾಲಕರ, ನಿರ್ವಾಹಕರ ಹಾಗೂ ತಾಂತ್ರಿಕ ಸಿಬ್ಬಂದಿಗಳ ಸಂಖ್ಯೆ ಎಷ್ಟು ?

ಆ) ಕೊರತೆ ಇರುವ ಚಾಲಕರ ನಿರ್ವಾಹಕರ ಹಾಗೂ ತಾಂತ್ರಿಕ ಸಿಬ್ಬಂದಿಗಳ ಸಂಖ್ಯೆ ಎಷ್ಟು ?

ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು).—

ಅ) ಮತ್ತು ಆ) ಹಿರೇಕೆರೂರು ಘಟಕಕ್ಕೆ ಚಾಲಕರ, ನಿರ್ವಾಹಕರ ಮತ್ತು ತಾಂತ್ರಿಕ ಸಿಬ್ಬಂದಿ ಶ್ರೇಣಿಯಲ್ಲಿ ಮಂಜೂರಾದ ಹುದ್ದೆಗಳು ಮತ್ತು ಈ ಶ್ರೇಣಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಮತ್ತು ಖಾಲಿಯಿರುವ ಹುದ್ದೆಗಳ ವಿವರಗಳು ಈ ಕೆಳಕಂಡಂತಿವೆ.—

	ಮಂಜೂರಾದ ಹುದ್ದೆಗಳು	ಕಾರ್ಯನಿರ್ವಹಿಸುತ್ತಿರುವವರು	ಖಾಲಿ ಇರುವ ಹುದ್ದೆಗಳು
ಚಾಲಕರು	೧೮೨	ರೆಗ್ಯೂಲರ್—೧೫೮ ಬದಲಿ — ೨೫	ಖಾಲಿ ಇರುವುದಿಲ್ಲ
ನಿರ್ವಾಹಕರು	೧೮೨	ರೆಗ್ಯೂಲರ್—೧೫೮ ಬದಲಿ — ೩೪	ಖಾಲಿ ಇರುವುದಿಲ್ಲ
ತಾಂತ್ರಿಕ ಸಿಬ್ಬಂದಿ	೧೧೪	೯೮	೧೬